ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Jnana Jyothi Central College Campus,
Dr. B.R. Ambedkar Veedhi, Bengaluru – 560001.
PhNo.080-22131385, E-mail: registrar@bcu.ac.in

ಸಂ. ಬೆಂನವಿ/ಶೈ.ವಿ/ಆನರ್ಸ/ /2024–25 ದಿನಾಂಕ: 24.09.2024

## ಅಧಿಸೂಚನೆ

ವಿಷಯ: 2021–22 ನೇ ಸಾಲಿನಲ್ಲಿ ಎನ್.ಇ.ಪಿ. ಆಧಾರಿತ ವ್ಯಾಸಂಗ ಕ್ರಮಗಳ ಪ್ರಕಾರ ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಗೆ ದಿನಾಂಕ 08.05.2024ರ ಸರ್ಕಾರದ ಆದೇಶದ ಪ್ರಕಾರ 2024–25ನೇ ಸಾಲಿನಲ್ಲಿ 4ನೇ ವರ್ಷದ ಆನರ್ಸ ವ್ಯಾಸಂಗವನ್ನು ಮುಂದುವರೆಸಲು ಅವಕಾಶ ನೀಡುವ ಕುರಿತು

ಉಲ್ಲೇಖ
1. ಸರ್ಕಾರದ ಆದೇಶ ಸಂಖ್ಯೆ: ಇಡಿ 260 ಯುಎನ್ಇ 2019(ಭಾಗ1) ದಿನಾಂಕ: 07.08.2021.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 166 ಯುಎನ್ಇ 2023 ದಿನಾಂಕ: 08.05.2024.
3. ದಿನಾಂಕ: 21.09.2024 ರಂದು ಜರುಗಿದ ಆಯ್ದ ಕಾಲೇಜುಗಳ ಪ್ರಾಂಶುಪಾಲರ, ಡೀನರ ಮತ್ತು ಅಧಿಕಾರಿಗಳ ಸಭೆಯ ನಡವಳಿಗಳು

****

1. ಉಲ್ಲೇಖ (1) ಸರ್ಕಾರದ ಆದೇಶದ ಪ್ರಕಾರ 2021–22ನೇ ಸಾಲಿನಿಂದ ರಾಷ್ಟ್ರೀಯ ಶಿಕ್ಷಣ ನೀತಿ (ಎನ್.ಇ.ಪಿ 2020) ಅನುಷ್ಠಾನಗೊಳಿಸಲಾಗಿತ್ತು. ತದನಂತರ, ರಾಜ್ಯ ಶಿಕ್ಷಣ ನೀತಿ ಆಯೋಗದ ಮಧ್ಯಂತರ ವರದಿಯ ಆಧಾರದ ಮೇಲೆ ಸರ್ಕಾರದ ಆದೇಶ ಸಂಖ್ಯೆ: ಇಡಿ 166 ಯುಎನ್ಇ 2023 ದಿನಾಂಕ. 08.05.2024ರನ್ನು ಹೊರಡಿಸಿ, 2021–22 ಪೂರ್ವದಲ್ಲಿ ಇದ್ದ ವ್ಯವಸ್ಥೆಯಂತೆ ಮೂರು ವಿಷಯಗಳ ಕಾಂಬಿನೇಷನ್‌ಗಳ ಮೂರು ವರ್ಷದ ಪದವಿ ವ್ಯಾಸಂಗವನ್ನು 2024–25ನೇ ಸಾಲಿನಿಂದ ಜಾರಿಗೊಳಿಸಲಾಗಿದೆ. ಸದರಿ ಆದೇಶದಲ್ಲಿ ನೀಡಿರುವ ನಿರ್ದೇಶನದ ಪ್ರಕಾರ, ರಾಷ್ಟ್ರೀಯ ಶಿಕ್ಷಣ ನೀತಿ (ಎನ್.ಇ.ಪಿ 2020) ಪರಿನಿಯಮಗಳು ಜಾರಿಯಲ್ಲಿದ್ದ 2021–22, 2022–23, 2023–24 ಸಾಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು 3ವರ್ಷ ವ್ಯಾಸಂಗ ಪೂರೈಸಿದ ನಂತರ 4ನೇ ವರ್ಷದ ಆನರ್ಸ ವ್ಯಾಸಂಗ ಮುಂದುವರೆಸಲು ಆಸಕ್ತಿ ಹೊಂದಿದ್ದಲ್ಲಿ, ಅಂತಹ ವಿದ್ಯಾರ್ಥಿಗಳಿಗೆ 4ನೇ ವರ್ಷದ ಆನರ್ಸ ವ್ಯಾಸಂಗ ಮುಂದುವರೆಸಲು ಅವಕಾಶ ಕಲ್ಪಿಸಬೇಕೆಂಬ ನಿರ್ದೇಶನವಿರುತ್ತದೆ. ಅದರ ಪ್ರಕಾರ 26.07.2024 ಹಾಗೂ 31.08.2024 ರಂದು ಮಹಾವಿದ್ಯಾಲಯಗಳಿಗೆ ಸುತ್ತೋಲೆ ಹೊರಡಿಸಿ, 4ನೇ ವರ್ಷದ ಆನರ್ಸ ವ್ಯಾಸಂಗ ಮುಂದುವರೆಸಲು ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳ ವಿವರಗಳನ್ನು ಹಾಗೂ ಸದರಿ ವ್ಯಾಸಂಗವನ್ನು ನೀಡಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲು ಸಿದ್ಧತೆರಿರುವ ಕಾಲೇಜುಗಳ ಮಾಹಿತಿ ತರಿಸಲಾಗಿದೆ.

2. ಜರುಗಿದ ಉಲ್ಲೇಖ (3) ನಮೂದಿಸಿದ ದಿನಾಂಕ 21.09.2024 ರಂದು ಜರುಗಿದ ಸಭೆಯಲ್ಲಿ ಎನ್.ಇ.ಪಿ. ವ್ಯಾಸಂಗ ಕ್ರಮದ ಆಧಾರದ ಮೇಲೆ 2021–22, 2022–23, 2023–24 ರಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು 4ನೇ ವರ್ಷದ ಆನರ್ಸ ಪದವಿ ಮುಂದುವರೆಸುವ ಕುರಿತು ಕೂಲಂಕುಷವಾಗಿ ಚರ್ಚಿಸಿ ಅಭಿಪ್ರಾಯಗಳನ್ನು ಪಡೆಯಲಾಗಿದೆ.

3. ಮೇಲೆ ನಮೂದಿಸಿದ ಉಲ್ಲೇಖ (2)ರ ಸರ್ಕಾರದ ಆದೇಶದಲ್ಲಿ 2021–22, 2022–23, 2023–24 ರಲ್ಲಿ ಎನ್.ಇ.ಪಿ. ಆಧಾರದ ವ್ಯಾಸಂಗ ಕ್ರಮದ ಪ್ರಕಾರ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳು ತಮ್ಮ ಉನ್ನತ ಶಿಕ್ಷಣದ ಅಧ್ಯಯನವನ್ನು ಸದರಿ ಮಾರ್ಗಸೂಚಿಯಂತೆಯೇ ಮುಂದುವರೆಸಿ, 3 ವರ್ಷಗಳ ಸ್ನಾತಕ ಅಥವಾ 4 ವರ್ಷಗಳ ಸ್ನಾತಕ ಆನರ್ಸ ಪದವಿಯೊಂದಿಗೆ ಅಧ್ಯಯನವನ್ನು ಪೂರ್ಣಗೊಳಿಸಲು

ಅವಕಾಶ ಕಲ್ಪಿಸಲಾಗಿದೆ. ಈ ಕುರಿತು, 4ನೇ ವರ್ಷದ ಆನರ್ಸ ವ್ಯಾಸಂಗ ಮುಂದುವರೆಸಲು ಆಸಕ್ತಿ ವ್ಯಕ್ತಪಡಿಸಿರುವ ವಿದ್ಯಾರ್ಥಿಗಳ ಹಾಗೂ ವ್ಯಾಸಂಗದ ವ್ಯವಸ್ಥೆ ಮಾಡಲು ಸಿದ್ಧರಿರುವ ಮಹಾವಿದ್ಯಾಲಯಗಳು ಸಲ್ಲಿಸಿರುವ ಮಾಹಿತಿಯನ್ನು ಪರಿಗಣಿಸಿ ಕೆಳಕಂಡ ಮಹಾವಿದ್ಯಾಲಯಗಳಿಗೆ ಅವುಗಳ ಮುಂದೆ ನಮೂದಿಸಿರುವ ವಿಷಯ/ಕೋರ್ಸುಗಳಲ್ಲಿ 4ನೇ ವರ್ಷದ ಆನರ್ಸ್ ವ್ಯಾಸಂಗವನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ.

| ಕ್ರ.ಸಂ. | ಮಹಾವಿದ್ಯಾಲಯದ ಹೆಸರು. | ಕೋರ್ಸು/ವಿಷಯಗಳು |
|---|---|---|
| 1 | ಎಸ್.ಎಸ್.ಎಂ.ಆರ್.ವಿ. ಕಾಲೇಜು | ಬಿ. ಕಾಂ. |
| 2 | ಶೇಷಾದ್ರಿಪುರಂ ಕಾಲೇಜು | ಬಿ. ಕಾಂ. |
| 3 | ಶೇಷಾದ್ರಿಪುರಂ ಇನಿಟಿಟ್ಯೂಟ್ ಆಫ್ ಕಾಮರ್ಸ ಮತ್ತು ಮ್ಯಾನೇಜಮೆಂಟ್. | ಬಿ. ಕಾಂ. |
| 4 | ಸರ್ಕಾರಿ ಆರ್.ಸಿ. ಕಾಲೇಜು | ಬಿ. ಕಾಂ. ಮತ್ತು ಬಿ.ಬಿ.ಎ |
| 5 | ವಿ.ಇ.ಟಿ. ಕಾಲೇಜು | ಬಿ. ಕಾಂ. ಮತ್ತು ಬಿ.ಬಿ.ಎ |
| 6 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಬ್ಬಾಳ | ಬಿ. ಕಾಂ. |
| 7 | ಎಂ.ಇ.ಎಸ್. ಕಾಲೇಜು | ಬಿ. ಕಾಂ. ಮತ್ತು ಬಿ. ಕಾಂ. (ಅಕೌಂಟಿಂಗ್ ಮತ್ತು ಫೈನಾನ್ಸ) |
| 8 | ಎಸ್.ಆರ್.ಜೆ.ಸಿ. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ | ಬಿ. ಕಾಂ. |
| 9 | ಕೆ.ಎಲ್.ಇ. ಕಾಲೇಜು | ಬಿ.ಸಿ.ಎ ಮತ್ತು ಬಿ.ಎಸ್ಸಿ ಕಂಪ್ಯೂಟರ್ ಸೈನ್ಸ |
| 10 | ಎಮ್.ಎಸ್.ರಾಮಯ್ಯ ಕಾಲೇಜು | ಬಿ.ಎಸ್ಸಿ. ಬಯೋಟೆಕ್ನಾಲಜಿ |
| 11 | ಇಂಡಿಯನ್ ಇನ್ಸಟಿಟ್ಯೂಟ್ ಆಫ್ ಸೈಕಾಲಾಜಿಕಲ್ ರೀಸರ್ಚ | ಬಿ.ಎಸ್ಸಿ. ಮನಃಶಾಸ್ತ್ರ |

<u>ಷರತ್ತು ಮತ್ತು ನಿಬಂಧನೆಗಳು:</u>

1. ಮೇಲೆ ನಮೂದಿಸಿದ ಮಹಾವಿದ್ಯಾಲಯಗಳು, 4ನೇ ವರ್ಷದ ಆನರ್ಸ ವ್ಯಾಸಂಗವನ್ನು ಪ್ರಾರಂಭಿಸಲು ಅಗತ್ಯವಾದ ಶಿಕ್ಷಕರ, ವರ್ಗಗಳ, ಗ್ರಂಥಾಲಯ ಮತ್ತು ಇತರ ಸಿದ್ಧತೆಗಳನ್ನು ಮಾಡಿಕೊಳ್ಳಲು ಸೂಚಿಸಲಾಗಿದೆ.
2. 4ನೇ ವರ್ಷದ ಆನರ್ಸ ವಿಷಯಗಳ ವ್ಯಾಸಂಗಕ್ಕೆ ಅನುಮತಿ ನೀಡಲಾಗಿರುವ ಮಹಾವಿದ್ಯಾಲಯಗಳಲ್ಲಿ ಇತರೆ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳು ಆಸಕ್ತಿ ಹೊಂದಿದಲ್ಲಿ ಪ್ರವೇಶ ಪಡೆಯಲು ಆಯಾ ಕೋರ್ಸುಗಳಿಗೆ ನಿಗಧಿತವಾದ ಗರಿಷ್ಠ ಪ್ರವೇಶ ಸಂಖ್ಯೆಗೆ ಸೀಮಿತಗೊಳಿಸಿ ಅನುಮತಿ ನೀಡಲಾಗಿದೆ.
3. ನಿಗಧಿತ ಸಂಖ್ಯೆಗಿಂತ ಹೆಚ್ಚುವರಿ ವಿದ್ಯಾರ್ಥಿಗಳು ಆಸಕ್ತಿ ವ್ಯಕ್ತಪಡಿಸಿದಲ್ಲಿ ಹೆಚ್ಚುವರಿ ವಿಭಾಗವನ್ನು ಪ್ರಾರಂಭಿಸಬಹುದಾಗಿದೆ. ಈ ಕುರಿತು ವಿಶ್ವವಿದ್ಯಾನಿಲಯದ ಅನುಮೋದನೆ ಪಡೆಯತಕ್ಕದ್ದು.
4. ಪ್ರಸ್ತುತ ಸಲ್ಲಿಸಿರುವ ಪಟ್ಟಿಯ ಪ್ರಕಾರ 15ಕ್ಕಿಂತ ಕಡಿಮೆ ವಿದ್ಯಾರ್ಥಿಗಳ ಸಂಖ್ಯೆ ಹೊಂದಿರುವ ಕೆ.ಎಲ್.ಇ. ಕಾಲೇಜು ಮತ್ತು ಎಂ.ಇ.ಎಸ್. ಕಾಲೇಜುಗಳ ಬಯೋಟೆಕ್ನಾಲಜಿ ವಿದ್ಯಾರ್ಥಿಗಳು, ಎಂ.ಎಸ್. ರಾಮಯ್ಯ ಮಹಾವಿದ್ಯಾಲಯದಲ್ಲಿ ಪ್ರವೇಶ ಪಡೆಯಲು, ಎಂ.ಇ.ಎಸ್. ಕಾಲೇಜಿನ ಬಿ.ಎಸ್ಸಿ ಮನಃಶಾಸ್ತ್ರ ವಿದ್ಯಾರ್ಥಿಗಳು ಇಂಡಿಯನ್ ಇನ್ಸಿಟಿಟ್ಯೂಟ್ ಆಫ್ ಸೈಕಾಲಾಜಿಕಲ್ ರೀಸರ್ಚ ಮಹಾವಿದ್ಯಾಲಯದಲ್ಲಿ, ಬಿ.ಎಸ್ಸಿ. ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿಗಳು, ಕೆ.ಎಲ್.ಇ. ಮಹಾವಿದ್ಯಾಲಯದಲ್ಲಿ ಪ್ರವೇಶ ಪಡೆಯಲು ಅನುಮತಿ ನೀಡಲಾಗಿದೆ.
5. ಪರ್ಲ ಅಕಾಡೆಮಿ ಸಂಸ್ಥೆಯನ್ನು ಮುಚ್ಚಲು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ, ಸದರಿ ಮಹಾವಿದ್ಯಾಲಯದಿಂದ, ಬಿ.ವಿ.ಎ ಮತ್ತು ಬಿ.ಎಸ್ಸಿ. ಫ್ಯಾಡ್ ಕೋರ್ಸುಗಳ ಆನರ್ಸ ವ್ಯಾಸಂಗಕ್ಕೆ ಅವಕಾಶ ನೀಡಲು ಸಾಧ್ಯವಾಗುವುದಿಲ್ಲ. ಹಾಗೂ ಈ ವಿಷಯದ ಆನರ್ಸ್ ಕೋರ್ಸುಗಳು

ಬೇರೆ ಮಹಾವಿದ್ಯಾಲಯದಲ್ಲಿ ಇಲ್ಲದೇ ಇರುವ ಕಾರಣ ಸದರಿ ವಿದ್ಯಾರ್ಥಿಗಳು ಸ್ನಾತಕೋತ್ತರ ವ್ಯಾಸಂಗವನ್ನು ಮುಂದುವರೆಸಬಹುದೆಂದು ತಿಳಿಸಲಾಗಿದೆ.

6. 4ನೇ ವರ್ಷದ ಆನರ್ಸ ಕೋರ್ಸಿಗೆ ಯು.ಯು.ಸಿ.ಎಂ.ಎಸ್. ತತ್ರಾಂಶದ ಪೋರ್ಟಲ್‌ನಲ್ಲಿ ಮ್ಯಾಪಿಂಗ ಮಾಡಿ ವಿದ್ಯಾರ್ಥಿಗಳ ಪ್ರವೇಶ ಹಾಗೂ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, ಅಗತ್ಯ ಮರ್ಪಾಡುಗಳನ್ನು ಮಾಡಲು, ಯು.ಯು.ಸಿ.ಎಂ.ಎಸ್. ಅಧಿಕಾರಿಗಳಿಗೆ ಪ್ರತ್ಯೇಕವಾಗಿ ವಿನಂತಿಸಲಾಗುವುದು.
7. 4ನೇ ವರ್ಷದ ಆನರ್ಸ ವ್ಯಾಸಂಗಕ್ಕೆ ಶಿಫಾರಸ್ಸು ಮಾಡಲಾದ ವಿಷಯಗಳಿಗೆ ಅಗತ್ಯವಾದ ಪಠ್ಯಕ್ರಮವನ್ನು ಕೂಡಲೆ ಸಿದ್ಧಪಡಿಸುವಂತೆ ಸಂಬಂಧಪಟ್ಟ ಅಧ್ಯಯನ ಮಂಡಳಿಗಳ ಅಧ್ಯಕ್ಷರುಗಳಿಗೆ ಸೂಚಿಸಲಾಗುವುದು.
8. ಕೆಳಗೆ ನಮೂದಿಸಿದ ಕೋರ್ಸು/ವಿಷಯಗಳಿಗೆ ಸಂಬಂಧಿಸಿದಂತೆ ಎಲ್ಲ ಮಹಾವಿದ್ಯಾಲಯಗಳ ಕ್ರೋಢೀಕೃತ ವಿದ್ಯಾರ್ಥಿಗಳ ಸಂಖ್ಯೆ 15ಕ್ಕಿಂತ ಕಡಿಮೆ ಇರುವುದನ್ನು ಪರಿಗಣಿಸಿ, ಸದರಿ ಕೋರ್ಸು/ವಿಷಯಗಳಲ್ಲಿ ಆನರ್ಸ ವ್ಯಾಸಂಗ ಪ್ರಾರಂಭಿಸುವುದು ಕಾರ್ಯ ಸಾಧ್ಯವಲ್ಲವೆಂದು, ಅಂತಹ ವಿದ್ಯಾರ್ಥಿಗಳು ಮೂರು ವರ್ಷಗಳ ಅಧ್ಯಯನದ ನಂತರ ಪದವಿ ಪ್ರಮಾಣ ಪತ್ರ ಪಡೆದು ನಿಗದಿತ ಸ್ನಾತಕೋತ್ತರ ವ್ಯಾಸಂಗ ಮುಂದುವರೆಸಬಹುದೆಂದು ಸಭೆ ಶಿಫಾರಸ್ಸು ಮಾಡಿತು

4. ಕೆಳಗೆ ನಮೂದಿಸಿದ ಕೋರ್ಸು/ವಿಷಯಗಳಿಗೆ ಸಂಬಂಧಿಸಿದಂತೆ ಎಲ್ಲ ಮಹಾವಿದ್ಯಾಲಯಗಳ ಕ್ರೋಢೀಕೃತ ವಿದ್ಯಾರ್ಥಿಗಳ ಸಂಖ್ಯೆ 15ಕ್ಕಿಂತ ಕಡಿಮೆ ಇರುವುದರಿಂದ ಸದರಿ ಕೋರ್ಸು/ವಿಷಯಗಳಲ್ಲಿ ಆನರ್ಸ ವ್ಯಾಸಂಗ ಪ್ರಾರಂಭಿಸುವುದು ಕಾರ್ಯಸಾಧ್ಯವಾಗುವುದಿಲ್ಲವೆಂದು ತೀರ್ಮಾನಿಸಲಾಗಿದೆ. ಅಂತಹ ವಿದ್ಯಾರ್ಥಿಗಳು ಮೂರು ವರ್ಷಗಳ ಅಧ್ಯಯನದ ನಂತರ ಪದವಿ ಪ್ರಮಾಣ ಪತ್ರ ಪಡೆದು ನಿಗದಿತ ಸ್ನಾತಕೋತ್ತರ ವ್ಯಾಸಂಗ ಮುಂದುವರೆಸಬಹುದಾಗಿರುತ್ತದೆ.

| ಕ್ರ.ಸಂ | ಮಹಾವಿದ್ಯಾಲಯದ ಹೆಸರು. | ಶಿಫಾರಸ್ಸು ಮಾಡದಿರುವ ಕೋರ್ಸು/ವಿಷಯಗಳು | | ವಿದ್ಯಾರ್ಥಿಗಳ ಸಂಖ್ಯೆ |
|---|---|---|---|---|
| 1. | ಎಂ.ಇ.ಎಸ್. ಕಾಲೇಜು | ಬಿ.ಎಸ್ಸಿ. | ಸಸ್ಯಶಾಸ್ತ್ರ | 01 |
| | | ಬಿ.ವಿ.ಎ | ಸಾಮಾನ್ಯ | 01 |
| | | ಬಿ.ಎ | ಇತಿಹಾಸ | 01 |
| | | | ಅರ್ಥಶಾಸ್ತ್ರ, | 01 |
| | | | ರಾಜ್ಯಶಾಸ್ತ್ರ | 01 |
| | | | ಮನ:ಶಾಸ್ತ್ರ | 02 |
| 2. | ಕೆ.ಎಲ್.ಇ. ಕಾಲೇಜು | ಬಿ.ಕಾಂ. | ಟೂರಿಸಂ | 06 |
| | | ಬಿ.ಎಸ್ಸಿ. | ಸಸ್ಯಶಾಸ್ತ್ರ | 06 |
| | | | ಗಣಿತಶಾಸ್ತ್ರ | 01 |
| | | | ರಸಾಯನಶಾಸ್ತ್ರ | 07 |
| | | ಬಿ.ಎ. | ಇತಿಹಾಸ | 06 |
| | | | ಅರ್ಥಶಾಸ್ತ್ರ | 02 |
| | | | ರಾಜ್ಯಶಾಸ್ತ್ರ | 02 |
| | | | ಮನ:ಶಾಸ್ತ್ರ | 04 |
| 3. | ಐ.ಐ.ಬಿ.ಎಸ್. ಇಂಟರ್ ನಾಷನಲ್ ಇನ್ಸಟಿಟೂಟ್ ಆಫ್ ಬಿಸಿನೆಸ್ ಸ್ಟಡೀಸ | ಬಿ.ಎ. | ಇತಿಹಾಸ | 05 |
| 4. | ಎಂ.ಎಸ್. ರಾಮಯ್ಯ ಕಾಲೇಜ ಆಫ್ ಆರ್ಟ್ಸ ಸೈನ್ಸ ಮತ್ತು ಕಾಮರ್ಸ | ಬಿ.ಎಸ್ಸಿ | ಜನೆಟಿಕ್ಸ್ | 02 |
| 5. | ಎಸ್.ಆರ್.ಜೆ.ಸಿ. ಆರ್ಟ್ಸ ಸೈನ್ಸ ಮತ್ತು ಕಾಮರ್ಸ ಮಹಾವಿದ್ಯಾಲಯ | ಬಿ.ಎಸ್ಸಿ. | ಸಸ್ಯಶಾಸ್ತ್ರ | 05 |

ಆನರ್ಸ್ ವ್ಯಾಸಂಗಕ್ಕೆ ಅನುಮತಿ ನೀಡಲಾಗಿರುವ ಮಹಾವಿದ್ಯಾಲಯಗಳು ತಮಗೆ ಅನುಮತಿ ನೀಡಿರುವ ವಿಷಯ/ಕೋರ್ಸುಗಳಿಗೆ ಸಂಬಂಧಿಸಿದಂತೆ, ಮೇಲಿನ ನಿಬಂಧನೆಗಳ ಅನುಸಾರ ಪ್ರವೇಶ ಪ್ರಕ್ರಿಯೆ ಪ್ರಾರಂಭಿಸಿ 30.09.2024ರ ದಿನಾಂಕದೊಳಗೆ ಭೌತಿಕವಾಗಿ ಪ್ರವೇಶಾತಿಗಳನ್ನು ಪೂರ್ಣಗೊಳಿಸಲು ಅನುಮತಿ ನೀಡಲಾಗಿದೆ.

ಕುಲಸಚಿವರು

ಪ್ರತಿಗಳು:

1. ಮೇಲೆ ನಮೂದಿಸಿದ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ-ಬೆಂ.ನ.ವಿ, ಬೆಂಗಳೂರು.
2. ಕುಲಸಚಿವರು (ಮೌಲ್ಯಮಾಪನ), ಬೆಂ.ನ.ವಿ, ಬೆಂಗಳೂರು.
3. ವಿತ್ತಾಧಿಕಾರಿಗಳು, ಬೆಂ.ನ.ವಿ, ಬೆಂಗಳೂರು.
4. ಕುಲಪತಿ/ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಬೆಂ.ನ.ವಿ, ಬೆಂಗಳೂರು.
5. ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸಲು
6. ಕಛೇರಿ ಪ್ರತಿ